# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 793 |
| ಸದಸ್ಯರ ಹೆಸರು | : | ಶ್ರೀ ನಿರಾಣಿ ಹನಮಂತ ರುದ್ರಪ್ಪ, (ವಿಧಾನ ಪರಿಷತ್‌ನಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 21-02-2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಅ.ನಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ರಾಷ್ಟ್ರೀಯ ಹೆದ್ದಾರಿ ಹುಬ್ಬಳ್ಳಿ ವಿಜಯಪುರ (ಎನ್ ಹೆಚ್-218 ಮಾರ್ಗದಲ್ಲಿ ಯಾವುದಾದರೂ ಕಟ್ಟಡಗಳನ್ನು ನಿಯಮಬಾಹಿರವಾಗಿ ನಿರ್ಮಿಸಲಾಗಿದೆಯೆ ನಿರ್ಮಿಸಿದ್ದಲ್ಲಿ ಆ ಕಟ್ಟಡ ಸ್ಥಳ ಮತ್ತು ಸಂಪೂರ್ಣ ವಿವರಗಳ ಮಾಹಿತಿ ನೀಡುವುದು. ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು. | ರಾಷ್ಟ್ರೀಯ ಹೆದ್ದಾರಿ-218 ರಲ್ಲಿ ಒಟ್ಟು 193 ಕಿ.ಮೀ. ಉದ್ದವಿದ್ದು, ಇದರಲ್ಲಿ ವಿಜಯಪುರ ವಿಭಾಗದ ವ್ಯಾಪ್ತಿಯಲ್ಲಿ 56.00 ಕಿ.ಮೀ. ಉದ್ದ ಹಾಗೂ ಹುಬ್ಬಳ್ಳಿ ವಿಭಾಗದ ವ್ಯಾಪ್ತಿಯಲ್ಲಿ 137.00 ಕಿ.ಮೀ. ಉದ್ದವಿರುತ್ತದೆ.<br><br>ಈ ರಸ್ತೆಯು ರಾಜ್ಯ ಹೆದ್ದಾರಿಯಿಂದ ರಾಷ್ಟ್ರೀಯ ಹೆದ್ದಾರಿಗೆ ದಿನಾಂಕ: 12.10.2000 ರಲ್ಲಿ ಪರಿವರ್ತನೆಗೊಂಡು ಲೋಕೋಪಯೋಗಿ ಇಲಾಖೆಯಿಂದ ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ಹಸ್ತಾಂತರಗೊಂಡಿದ್ದು, ಹಸ್ತಾಂತರಗೊಂಡ ಸಮಯದಲ್ಲಿ ಇದ್ದ Right of Way ಯಲ್ಲಿ ಯಾವುದೇ ಅನಧಿಕೃತ ಕಟ್ಟಡಗಳನ್ನು ನಿರ್ಮಾಣ ಮಾಡದಂತೆ ಬಾರದಂತೆ ರಾಷ್ಟ್ರೀಯ ಹೆದ್ದಾರಿ ವಿಭಾಗಗಳಿಂದ ಕ್ರಮ ವಹಿಸಲಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ ವಿಭಾಗಗಳಿಗೆ ಹಸ್ತಾಂತರವಾದ Right of Way ನಲ್ಲಿ ಇತ್ತೀಚೆಗೆ ನಿರ್ಮಿಸಲಾಗುತ್ತಿರುವ ಕೆಲವು ಕಟ್ಟಡಗಳನ್ನು Right of Way ಒಳಗೆ ನಿರ್ಮಿಸದಂತೆ ಕೇಂದ್ರ ಭೂಸಾರಿಗೆ ಮಂತ್ರಾಲಯದ ಮಾರ್ಗಸೂಚಿ ದಿನಾಂಕ:26.06.2020 ರಂತೆ ನಿಯಂತ್ರಿಸಲು ಕ್ರಮ ವಹಿಸಲಾಗುತ್ತಿದೆ. |
| (ಆ) | ರಾಷ್ಟ್ರೀಯ ಹೆದ್ದಾರಿ ಹುಬ್ಬಳ್ಳಿ ವಿಜಯಪುರ (ಎನ್ ಹೆಚ್-218 ಪಕ್ಕದಲ್ಲಿ ಯಾವುದಾದರೂ ಕಟ್ಟಡ ನಿರ್ಮಿಸುತ್ತಿರುವುದರ ಬಗ್ಗೆ ಸರ್ಕಾರಕ್ಕೆ ಯಾವುದಾದರೂ ಸಾರ್ವಜನಿಕ ತಕರಾರು ಅರ್ಜಿಗಳು ಬಂದಿವೆಯೇ ಬಂದಿದ್ದಲ್ಲಿ ಅಂತಹ ಕಟ್ಟಡಗಳ ವಿರುದ್ಧ ಯಾವ ಕ್ರಮ ಕ್ರಮಗಳನ್ನು ಕೈಗೊಳ್ಳಲಾಗಿದೆ. (ವಿವರಗಳನ್ನು ನೀಡುವುದು) | ಲೋಕೋಪಯೋಗಿ ಇಲಾಖೆಯಿಂದ ರಾಷ್ಟ್ರೀಯ ಹೆದ್ದಾರಿ ವಿಭಾಗಗಳಿಗೆ ಹಸ್ತಾಂತರಿಸಿದ ಸಮಯದಲ್ಲಿದ್ದ Right of Way ನಲ್ಲಿ ನಂತರದ ದಿನಗಳಲ್ಲಿ ರಾಷ್ಟ್ರೀಯ ಹೆದ್ದಾರಿ ವಿಭಾಗ, ಹುಬ್ಬಳ್ಳಿ ವ್ಯಾಪ್ತಿಯಡಿಯಲ್ಲಿ ದಾಖಲಿಸಿದ ದೂರುಗಳು ಈ ಕೆಳಕಂಡತಿವೆ.<br>• ರಾಷ್ಟ್ರೀಯ ಹೆದ್ದಾರಿ ವಿಭಾಗ, ಹುಬ್ಬಳ್ಳಿ ವ್ಯಾಪ್ತಿಯಡಿ ಬರುವ ನರಗುಂದ ಉಪವಿಭಾಗ ಕಛೇರಿಗೆ ಬಿಳಗಿ ತಾಲೂಕಿನ ಶ್ರೀ ಸಿದ್ದಪ್ಪ ಪೂಜಾರಿ ಇವರು ದಿನಾಂಕ 09/10/2023 ರಲ್ಲಿ ಬೀಳಗಿ ತಾಲ್ಲೂಕಿನ ಮನ್ನಿಕೇರಿ ಗ್ರಾಮದ ಸ.ನಂ.219/7 ರಲ್ಲಿ ರಾಷ್ಟ್ರೀಯ ಹೆದ್ದಾರಿಯ ನಿಯಮಾವಳಿಗಳ ಪ್ರಕಾರ 40 ಮೀಟರ್ ಜಾಗ ಬಿಡದೇ, ಅನಧಿಕೃತವಾಗಿ ಯಾವುದೇ ಪರವಾನಿಗೆ ಇಲ್ಲದೆ ಕಟ್ಟುತ್ತಿರುವ ಕಟ್ಟಡವನ್ನು ತೆರವುಗೊಳಿಸುವಂತೆ ಅರ್ಜಿ ಸಲ್ಲಿಸಿರುತ್ತಾರೆ.<br>• ಈ ಬಗ್ಗೆ ಉಪವಿಭಾಗ ನರಗುಂದ ಕಛೇರಿಯಿಂದ ಸ್ಥಳ ಪರಿಶೀಲಿಸಲಾಗಿ, ಸದರಿ ಕಟ್ಟಡದ ಜಾಗದಲ್ಲಿ ರಾಷ್ಟ್ರೀಯ |

| | | |
|---|---|---|
| | | ಹೆದ್ದಾರಿ ವಲಯದಿಂದ ಇಲ್ಲಿಯವರೆಗೆ ಯಾವುದೇ ಭೂಸ್ವಾಧೀನವಾಗಿರುವುದಿಲ್ಲ. ಸದರಿ ಸ್ಥಳದಲ್ಲಿ ಇಲಾಖೆಯ ಭೂಗಡಿರೇಖೆ (ROW) 23.00 ಮೀ. ಇರುತ್ತದೆ (@ ಸರಪಳಿ 61.15 ಕಿ.ಮೀ.) ತದನಂತರ ನಿರ್ಮಿಸುತ್ತಿರುವ ಕಟ್ಟಡವು ಇಲಾಖೆಯ ಗಡಿರೇಖೆಯಿಂದ 6.50 ಮೀಟರ್‌ದಲ್ಲಿರುವುದು ಕಂಡುಬಂದಿರುತ್ತದೆ<br>• ಈ ಹಿನ್ನೆಲೆಯಲ್ಲಿ ಶ್ರೀ ಸಂಗಪ್ಪ ಸತ್ಯಪ್ಪ ಮೇಲ್ನಾಡ ರವರಿಗೆ ಪತ್ರ ಬರೆದು, ಇಲಾಖೆಯ ಅನುಮತಿ ಪಡೆಯದೇ ಕಟ್ಟಡವನ್ನು ನಿರ್ಮಿಸಿದ್ದಲ್ಲಿ ಮುಂದಿನ ದಿನಮಾನದಲ್ಲಿ ರಸ್ತೆಯ ಅಗಲೀಕರಣ ಸಮಯದಲ್ಲಿ ಕಟ್ಟಡವನ್ನು ತೆರವುಗೊಳಿಸಲಾಗುವುದೆಂದು ತಿಳಿಸಲಾಗಿರುತ್ತದೆ. ಈ ಬಗ್ಗೆ ಅರ್ಜಿದಾರರಾದ ಶ್ರೀ ಸಿದ್ದಪ್ಪ ಪೂಜಾರಿ ಇವರಿಗೆ ಹಿಂಬರಹ ನೀಡಲಾಗಿದೆ. |
| (ಇ) | ಕಟ್ಟಡಗಳ ನಿರ್ಮಾಣಕ್ಕೆ ಅವಕಾಶ ನೀಡಿದ ಅಧಿಕಾರಿಗಳ ವಿರುದ್ದ ಕ್ರಮ ಕೈಗೊಳ್ಳಲಾಗಿದೆಯೇ;<br>ಕೈಗೊಂಡಿದ್ದಲ್ಲಿ ವಿವರ ನೀಡುವುದು. | ರಾಷ್ಟ್ರೀಯ ಹೆದ್ದಾರಿ–218 ರಸ್ತೆಯು ಮೂಲತಃ ಲೋಕೋಪಯೋಗಿ ಇಲಾಖೆಯ ರಾಜ್ಯ ಹೆದ್ದಾರಿಯಾಗಿದ್ದು, ಸದರಿ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆಗೊಳಿಸಿದ ನಂತರ ರಾಷ್ಟ್ರೀಯ ಹೆದ್ದಾರಿ ವಿಭಾಗಗಳಿಗೆ ದಿನಾಂಕ:12.10.2000ರಲ್ಲಿ ಹಸ್ತಾಂತರಿಸಲಾಗಿದ್ದು, ಹಸ್ತಾಂತರಿಸಿದ ಸಮಯದಲ್ಲಿ ಇದ್ದಂತಹ ROW ಅನ್ನು ರಾಷ್ಟ್ರೀಯ ಹೆದ್ದಾರಿ ವಿಭಾಗಗಳಿಂದ ಯಾವುದೇ ಅನಧಿಕೃತ ಕಟ್ಟಡಗಳು ಬಾರದಂತೆ ತಡೆಯಲು ಕ್ರಮ ಕೈಗೊಳ್ಳಲಾಗುತ್ತಿರುವುದರಿಂದ ಯಾವುದೇ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಮೇಯ ಉದ್ಭವಿಸುವುದಿಲ್ಲ. |

ಕಡತ ಸಂಖ್ಯೆ: ಲೋಇ 50 ಸಿಎನ್‌ಹೆಚ್ 2024 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು